**OS. No.33/2014**

**P.W-1**

**( ದಿನಾಂಕ.23-01-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಪಾಟೀ ಸವಾಲುಃ** 1 ರಿಂದ 3 ನೇ ಮತ್ತು 5 ನೇ ಪ್ರತಿವಾದಿ ಪರವಾಗಿ ಶ್ರೀ. B.A.D ವಕೀಲರಿಂದ

1 ರಿಂದ 3 ಹಾಗೂ 5 ನೇ ಪ್ರತಿವಾದಿಯರಿಗೆ ದಾವಾ ಸ್ವತ್ತುಗಳಲ್ಲಿ ಪಾಲು ಇದ್ದಿದ್ದರಿಂದಲೇ ನಾನು ಅವರನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದರೆ ಸರಿ. ರಾಚಮ್ಮ ಎಂದರೆ ನನ್ನ ಅಜ್ಜಿ. ಅಂದರೆ ರಾಚಮ್ಮ 1 ನೇ ಪ್ರತಿವಾದಿ ಹೆಂಡತಿ ಇರುತ್ತಾಳೆ. ದಾವಾ ಮಾಡುವ ಕಾಲಕ್ಕೆ 2 ನೇ ಪ್ರತಿವಾದಿಗೆ ಪಾಲು ಕೇಳುವ ಹಕ್ಕು ಇರಲಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳೆಲ್ಲವೂ ಹಿರಿಯರ ಆಸ್ತಿಯಾಗಿರುತ್ತವೆ. 4 ನೇ ಪ್ರತಿವಾದಿ ಹೆಸರಿನಲ್ಲಿ ದಾವಾ ಸ್ವತ್ತು ಹೇಗೆ ಹೋಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ತನ್ನ ಮಕ್ಕಳ ಮಧ್ಯದಲ್ಲಿ ಮನಸ್ತಾಪ ಬರಬಾರದೆಂಬ ಒಂದು ವ್ಯವಸ್ಥಾ ಪತ್ರ ಮಾಡಿರುತ್ತಾರೆಂದರೆ ಸರಿ. ಸದರಿ ವ್ಯವಸ್ಥಾ ಪತ್ರ ಪ್ರಕಾರ ಮ್ಯೂಟೇಶನಗಳಾಗಿವೆ ಎಂದರೆ ಸರಿ. ನನ್ನ ಹಕ್ಕನ್ನು ಮುಳುಗಿಸುವ ಉದ್ದೇಶ 1 ನೇ ಪ್ರತಿವಾದಿಗೆ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಕ್ರಯಪತ್ರದಂತೆ ಯಾವುದೇ ಹಣ ಮುಟ್ಟಿಲ್ಲ ಎಂದರೆ ಸರಿ. ನನ್ನ ತಂದೆ ಅಂಬಾರಾಯ ಅಂದರೆ 3 ನೇ ಪ್ರತಿವಾದಿ ನಮಗಾಗಲೀ, 1 ನೇ ಪ್ರತಿವಾದಿಗೆ ಆಗಲೀ ಕ್ರಯದ ಹಣ ಕೊಟ್ಟಿರುವುದಿಲ್ಲ. ಏಕೆಂದರೆ ಜಮೀನು ಕೊಂಡುಕೊಂಡವರು ನಮ್ಮ ತಂದೆಗೆ ಹಣ ಕೊಟ್ಟಿಲ್ಲ ಎಂದು ನುಡಿಯುತ್ತಾರೆ.

**OS. No.33/2014**
**P.W-1**

5 ನೇ ಪ್ರತಿವಾದಿಯ ಪಾಲನ್ನು ದಾವಾ ಸ್ವತ್ತುಗಳಲ್ಲಿ ಕೊಡಲು ನಮ್ಮದೇನು ಏನು ತೊಂದರೆ ಇಲ್ಲ. ಅವರು ಬೇಕಾದರೆ ತೆಗೆದುಕೊಳ್ಳಬಹುದು. ನಮ್ಮ ಪಾಲನ್ನು ಕೊಡಲು 5 ನೇ ಪ್ರತಿವಾದಿಯ ಯಾವುದೇ ತೊಂದರೆ ಇಲ್ಲ ಎಂದರೆ ಸರಿ.

ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ವಕೀಲರಾದ ಶ್ರೀ. SSC ಪಾಟೀ ಸವಾಲಗೆ ಸಮಯಕಾಶ ಕೇಳಿರುತ್ತಾರೆ. ಆದ್ದರಿಂದ ಪಾಟೀ ಸವಾಲಿಗೆ ಸಮಯಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಆಳಂದ**